ಎಂ.ಕೆ. ರಾಜೇಶ್, ಚಾಮರಾಜನಗರ
*ಪ್ರತಿಯೊಬ್ಬ ಮನುಷ್ಯನೂ ತಾನು ವಿಭಿನ್ನ ವ್ಯಕ್ತಿ ಎಂದು ಚಿಂತಿಸುವುದೇಕೆ?*



ಒಂದೇ ಕಾರಣ – ಮಿಕ್ಕೆಲ್ಲ ಜನರ ಬಗ್ಗೆ ಇರುವ ಸಂಪೂರ್ಣ ಅಜ್ಞಾನ.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ತುಂಬಿದ ಕೊಡ ತುಳುಕಲ್ಲ. ತುಂಬಿದ ಯೌವನ...?*
ಸುಭಾನಲ್ಲಾ.....!

ದೇವೇಂದ್ರ, ಕಡೂರು
*ಸಂಸಾರದಲ್ಲಿ ಒಬ್ಬರು ಜೋರಿದ್ದರೆ ಮತ್ತೊಬ್ಬರು ಮೆತ್ತಗಿರಬೇಕಂತೆ. ಹೌದೆ?*
ಹಾಗೇನಿಲ್ಲ; ಇಬ್ಬರೂ ಜೋರಿರಬಹುದು; ಆಗ ಅಕ್ಕಪಕ್ಕದ ಮನೆಗಳವರು ಮೆತ್ತಗಿರುತ್ತಾರೆ – ಕದ್ದು ಕೇಳಲು!

ವಿ. ಹಮೀದ್, ವಿಟ್ಲ
*ಕನ್ನಡಿಗೂ, ಹುಡುಗಿಗೂ ಇರುವ ವ್ಯತ್ಯಾಸವೇನು?*
ಕನ್ನಡಿ ಆಕೃತಿಯನ್ನು ಬಿಂಬಿಸುತ್ತದೆ; ಹುಡುಗಿ ಸಂಸ್ಕೃತಿಯನ್ನು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ದೇವಸ್ಥಾನದ ಬದಲು ಎಲ್ಲವೂ ಬ್ಯಾಂಕುಗಳೇ ಆಗಿದ್ದರೆ ಹೇಗಿರುತ್ತೆ ಸಾರ್?*




ದೇಗುಲವೂ ಬ್ಯಾಂಕೇ – ಪಾಪವೆಂಬ ಹಳೆಯ ನೋಟು ಪಡೆದು ಪುಣ್ಯವೆಂಬ ಹೊಸ ಕರೆನ್ಸಿ ಕೊಡುತ್ತದಲ್ಲ!

ಎಂ.ಎ. ಕುಮಾರ್, ಬೆಂಗಳೂರು
*ಬಾವಿಯ ನೀರು ಬತ್ತಿದರೂ ಹೆಣ್ಣಿನ ಕಣ್ಣೀರು ಬತ್ತುವುದಿಲ್ಲವಲ್ಲಾ...?*
ಪ್ರತಿ ದಿನ ಹೊಸ ಹೊಸ ಸೆಲೆಗಳಿಂದ ಕಣ್ಣೀರು ಚಿಮ್ಮಿಸುವ ಸೀರಿಯಲ್ಲಮ್ಮನ ಕೃಪೆ!

ಮಹಾವೀರ ಕಾಸರ, ಶಿವಮೊಗ್ಗ
*ಕಪ್ಪುಹಣವನ್ನು ಪ್ರೀತಿಸುವವರು ಕಪ್ಪು ಸುಂದರಿಯನ್ನು ಏಕೆ ಪ್ರೀತಿಸುವುದಿಲ್ಲ?*
ಇರುವ ಕಪ್ಪುಹಣವೆಲ್ಲ ಕಪ್ಪುಸುಂದರಿ ಬೆಳ್ಳಗೆ ಕಾಣಲು ಬೇಕಾದ ಮೇಕಪ್‌ಗೇ ಖರ್ಚಾದೀತೆಂಬ ಭಯ.

ಕೃಷ್ಣಮೂರ್ತಿ ಎಸ್, ಬೆಂಗಳೂರು
*ಪ್ರಿಯಕರನೊಬ್ಬ ತನ್ನ ಪ್ರೇಯಸಿಗೆ ಒಂದು ಕೆಂಗುಲಾಬಿ, ಒಂದು ಬಿಳಿ ಗುಲಾಬಿಯನ್ನು ಕೊಟ್ಟ. ಇದರರ್ಥವೇನು?*
ಮ್ಯಾಚಿಂಗ್ ಇರಲೆಂದು – ತುಟಿಗೆ ಮ್ಯಾಚಿಂಗ್ ಕೆಂಪು, ತುಟಿಬಿರಿದಾಗ ಮೂಡುವ ಹಲ್ಲಿಗೆ ಮ್ಯಾಚಿಂಗ್ ಬಿಳಿ.

ಉಷಾ ಸೋಗಲ್, ತುರಹಳ್ಳಿ
*ನಮಗೂ ಹಕ್ಕಿಗಳಂತೆ ರೆಕ್ಕೆ ಇದ್ದಿದ್ದರೆ?*
ತಲೆಯಲ್ಲಿ ಕ್ಯಾಬಿನ್ ಸ್ಪೇಸ್, ಹೊಟ್ಟೆಯಲ್ಲಿ ಕಾರ್ಗೋ ಸ್ಪೇಸ್, ಮೂತಿಗೆ ಪ್ರೊಫೆಲರ್ ಬೇಡುತ್ತಿದ್ದರು.

ಬಾಲುಸುತ, ಬೆಂಗಳೂರು
*ರಾಮಾಯಣದ ಕೈಕೇಯಿ, ಮಹಾಭಾರತದ ಶಕುನಿಗೆ ಶ್ರೇಷ್ಠ ಖಳನಟ/ಟಿ ಪ್ರಶಸ್ತಿ ನೀಡಬಹುದಲ್ಲವೆ?*
ತಮಿಳುನಾಡಿನ ಚಿನ್ನಮ್ಮ, ಅಮೆರಿಕದ ಟ್ರಂಪ್ ಕೇಸ್ ಹಾಕುವರಂತೆ.

ರಾಮಯ್ಯ, ಕ್ಯಾತಸಂದ್ರ
*ಕುಂಬಳಕಾಯಿಯನ್ನು ಸಾಮಾನ್ಯವಾಗಿ ಗಂಡಸರ ಕೈಯಲ್ಲಿ ಒಡೆಸುತ್ತಾರಲ್ಲ, ಏಕೆ?*
ದಢೂತಿ ಹೆಂಡತಿಯ ಮೇಲಿನ ಸಿಟ್ಟನ್ನು ಹೀಗಾದರೂ ತೀರಿಸಿಕೊಳ್ಳಲಿ ಎಂದು.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಮೈದಾಸ ಮುಟ್ಟಿದ್ದೆಲ್ಲ ಚಿನ್ನವಾಗುತ್ತಿತ್ತಂತೆ. ನಮ್ಮ ರಾಜಕಾರಣಿಗಳು ಮುಟ್ಟಿದ್ದೆಲ್ಲ ಏನಾಗುವುದು?*
ಮಾಯ.

ಮುಕುಂದ ಹೆರಕಲ್ಲ, ಕಲಬುರ್ಗಿ
*ಗಣೇಶನಿಗೆ ಹೆಂಡತಿ, ಮಕ್ಕಳಿಲ್ಲ. ಆದರೂ ಪ್ರತಿವರ್ಷ ಕೆರೆಗೋ, ಬಾವಿಗೋ ಏಕೆ ಬೀಳುತ್ತಾನೆ?*
ಇರುವ ಅಲ್ಪಕಾಲದಲ್ಲೇ ಢೋಂಗಿ ಭಕ್ತರ ನವರಂಗಿ ಆಟಗಳಿಂದ ಜಿಗುಪ್ಸೆ ಉಂಟಾಗುತ್ತದಂತೆ.

## ಬಹುಮಾನಿತ ಪ್ರಶ್ನೆ

ಹೆಚ್.ಆರ್. ಕೊಳಗಿ, ಸಾಗರ. ಮೊಬೈಲ್ :
*ನಮ್ಮ ಚಿತ್ರರಂಗದ ಮಂದಿಗೆ ನಮ್ಮ ಮಣ್ಣಿನ ವಾಸನೆಯ ಕಥೆಗಳು ಸಿಗುತ್ತಿಲ್ಲವೆ?*
ಸಿಕ್ಕದೆ ಏನು... ಶ್ರೀಮಂತ ಕಥೆಗಳಿಗೆ ಚೀಪ್ ಮೆಂಟಾಲಿಟಿ ಮ್ಯಾಚ್ ಆಗುತ್ತಿಲ್ಲವಷ್ಟೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಎಲ್ಲ ಪಕ್ಷಗಳಲ್ಲೂ ಕಾಮುಕ ಸಚಿವರ ಹಾವಳಿ ಇದೆಯಲ್ಲಾ...?*
ನಾಯಿ-ಕರು ಅಲ್ಲವೇ... ಮೂಲಜನ್ಮದ ವಾಸನೆ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಅವನು ಮದುವೆಗೆ ಒಪ್ಪದೆ ಫಾದರ್ ಆಗಲು ಹೊರಟಿದ್ದ. ಈ ವಾಕ್ಯವನ್ನು ನೀವು ಹೇಗೆ ಅರ್ಥೈಸುವಿರಿ?*
ಫಾದರ್ ಅಗಲು ಹೊರಡಲು ಕಾರಣ 'ನನ್' ಹ್ಯಾಡ್ ಲವ್ಡ್ ಹಿಮ್ ಎಂದು!

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ರಾಮಾಯಣದ ಸೀತೆಗೂ, ಮಹಾಭಾರತದ ದ್ರೌಪದಿಗೂ, ಆಧುನಿಕ ಮಹಿಳೆಗೂ ಇರುವ ಸಾಮಾನ್ಯ ಗುಣಧರ್ಮ ಯಾವುದು?*



ಶಂಕಿಸಿದರೂ, ಕಾಡಿದರೂ, ಕಾಡಿನಲ್ಲಿದ್ದರೂ ನಗುನಗುತ್ತಾ ಸೈರಿಸುವ ಗುಣ.

ಅಮರಯ್ಯಾ ಪತ್ರಿಮಠ, ಶೋರಾಪೂರ
*ನರಕದಲ್ಲೂ ಸ್ವರ್ಗವನ್ನು ಕಂಡವರುಂಟೇ?*
ಉಂಟು – ಹೋದ ಜಾಗಕ್ಕೆ ಹೊಂದಿಕೊಂಡುಬಿಡುವ ಕನ್ನಡಿಗರು.

ವಿ. ಹೇಮಂತಕುಮಾರ್, ಬೆಂಗಳೂರು
*ಪ್ರಾಣಿಗಳಂತೆ ಮನುಷ್ಯರಿಗೂ ಬಾಲ ಇದ್ದಿದ್ದರೆ?*
ಕೆಲವರಿಗೆ ಇದೆಯಲ್ಲಾ... ಬೇಕಾದಾಗ ಅಂಟಿಸಿಕೊಳ್ಳಬಹುದಾದ ಅದನ್ನು ನಾವು ಚೇಲಾ ಎನ್ನುತ್ತೇವೆ.

ಬಿ. ಚಂದ್ರೇಗೌಡ, ಬೆಂಗಳೂರು
*ಹೆಂಡತಿಯಲ್ಲಿ ಹೆಂಡ ಯಾಕಿದೆ?*
ಗಂಡನನ್ನು ಜೀವನದಲ್ಲಿ ಫುಲ್ ಟೈಟ್ ಆಗಿಸಲು, ಆಗಾಗ್ಗೆ ಕಿಕ್ ಕೊಡಲು.

■ ರಾಮ್